ದಿನಾಂಕ 06-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 1 ರವರ ಪರ ಶ್ರೀ ಆರ್.ಎನ್.ಎಚ್ . ವಕೀಲರಿಂದ

**32**. ನಿಪಿ-7 ನ್ನು ನಾನು ಓದಿದ್ದೇನೆ. ಆ ದಾವೆಯಲ್ಲಿ ನನ್ನನ್ನು ಎಷ್ಟನೇ ಪ್ರತಿವಾದಿಯಾಗಿ ಮಾಡಲಾಗಿತ್ತು ಎಂದು ಗೊತ್ತಿಲ್ಲ. ಆ ದಾವೆಯಲ್ಲಿ ಹಾಜರಾಗಿಲ್ಲ. ನನ್ನ ತಂದೆ ಮೃತ ಪಟ್ಟ ನಂತರ ನನ್ನ ತಾಯಿ, ನಾನು ಹಾಗೂ 1 ನೇ ಪ್ರತಿವಾದಿ ಮತ್ತು ನನ್ನ ಅಜ್ಜ ಮತ್ತು ಅಜ್ಜಿ ಜಂಟಿಯಾಗಿ ಕಾರವಾರ ನ್ಯಾಯಾಲಯದಲ್ಲಿ ಮೋಟಾರು ವಾಹನ ಕಾಯ್ದೆ ಪ್ರಕಾರ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನನಗೆ ಹಾಗೂ ಪ್ರತಿವಾದಿಗಳಿಗೆ ಪರಿಹಾರದ ಸಿಕ್ಕಿದೆ ಎಂದರೆ ಸರಿ. ಅದರಲ್ಲಿ ಪರಿಹಾರದ ಹಣವನ್ನು ನಾನು ವೈಯಕ್ತಿಕವಾಗಿ ಪಡೆದುಕೊಂಡಿದ್ದೇನೆ. 2 ನೇ ಪ್ರತಿವಾದಿ ಆ ಪ್ರಕರಣದಲ್ಲಿ ನನಗೆ ಹಾಗೂ 1 ನೇ ಪ್ರತಿವಾದಿಗೆ minor guardian ಆಗಿ ಮನೆ ಕಟ್ಟುವ ಸಲುವಾಗಿ ಆ ಪರಿಹಾರದ ಹಣ ಬಿಡುಗಡೆ ಮಾಡಬೇಕು ಎಂದು ಕೋರಿ ಹಣ ಪಡೆದಿದ್ದರು ಎಂದರೆ ಗೊತ್ತಿಲ್ಲ.

**33**. ದಾವಾ ಕ ಸ್ವತ್ತುಗಳ ಪೈಕಿ 1 ನೇ ಸ್ವತ್ತಿನ ಬೆಲೆ ರೂ. 15,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ನನ್ನ ಮದುವೆ 2001 ರಲ್ಲಿ ಆಗಿರುತ್ತದೆ. ಆ 1 ನೇ ಸ್ವತ್ತು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಕ 2 ನೇ ಸ್ವತ್ತಿನ ಬೆಲೆ ರೂ. 15,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಕ 3 ನೇ ಸ್ವತ್ತಿನ ಬೆಲೆ ರೂ. 15,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಕ 4 ನೇ ಸ್ವತ್ತಿನ ಬೆಲೆ ರೂ.50,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಕ 5 ನೇ ಸ್ವತ್ತಿನ ಬೆಲೆ ರೂ. 30,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಕ 6 ನೇ ಸ್ವತ್ತಿನ ಬೆಲೆ ರೂ. 30,000/- ಇತ್ತು ಎಂದು ತೋರಿಸುವ ರಶೀದಿ

ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಕ 7 ನೇ ಸ್ವತ್ತಿನ ಬೆಲೆ ರೂ. 40,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಗೃಹೋಪಯೋಗಿ ವಸ್ತುಗಳು ಎಂದು 6 ನೇ ಸ್ವತ್ತಿನ ಹೇಳಿರುವುದು ಬಟ್ಟೆ ಬರೆ ಹಾಗೂ ಪಾತ್ರೆ . ಅಲ್ಯೂಮಿನಿಯಂ ಪಾತ್ರೆಗಳು 20 ವರ್ಷದಲ್ಲಿ ಹಾಳಾಗುತ್ತದೆ ಎಂದರೆ ಸಾಕ್ಷಿ ಸ್ಟೀಲ್ ಪಾತ್ರೆಗಳು ಹಾಳಾಗುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಅಲ್ಯೂಮಿನಿಯಂ ಹಾಗೂ ಸ್ಟೀಲ್ ಪಾತ್ರೆಗಳು ಇತ್ತು ಎಂದು ಲೆಕ್ಕ ಹೇಳಲು ಆಗುವುದಿಲ್ಲ. ಅಂತಹ ಪಾತ್ರೆಗಳನ್ನು ಖರೀದಿಸಿದರೆ ರಶೀದಿಗಳು ಇರುತ್ತದೆ ಎಂದರೆ ಸಾಕ್ಷಿ ರಶೀದಿಗಳು ಇರುತ್ತವೆ ಹಾಗೂ ಯಾರು ಅದನ್ನು ಇಟ್ಟುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ದಾವಾ ಕ 8 ನೇ ಸ್ವತ್ತಿನ ಬೆಲೆ ರೂ. 3,00,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ಬಂಗಾರದ ಆಭರಣಗಳನ್ನು ಮಾಡಿಸಿದಾಗ ಅದಕ್ಕೆ ರಶೀದಿಗಳು ಕೊಡುತ್ತಾರೆ ಎಂದರೆ ಸರಿ. ದಾವಾ ಕ 9 ನೇ ಸ್ವತ್ತಿನ ಬೆಲೆ ರೂ. 20,00,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ನನಗೆ ಗೊತ್ತಿಲ್ಲ. ಬೆಳ್ಳಿಯ ಸಾಮಾನುಗಳು ಯಾವಾಗ ಖರೀದಿಸಿದ್ದು ಎಂದು ನನಗೆ ಮಾಹಿತಿ ಇಲ್ಲ. ಅವುಗಳನ್ನು ನನ್ನ ತಾಯಿ ಖರೀದಿಸಿದ್ದರು. ಅದರ ರಶಿದಿಗಳನ್ನು ನಾನು ಹಾಜರು ಪಡಿಸಿಲ್ಲ. ನನ್ನ ತಾಯಿ ಯ ಬಳಿ ಇರಬಹುದು. ಹೊಲಿಗೆ ಯಂತ್ರ ಯಾವಾಗ ಖರೀದಿಸಿದ್ದು ಹಾಗೂ ಅದು ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಕ 11 ನೇ ಸ್ವತ್ತಿನ ಬೆಲೆ ರೂ. 10,000/- ಇತ್ತು ಎಂದು ತೋರಿಸುವ ರಶೀದಿ ಹಾಜರು ಪಡಿಸಿಲ್ಲ. ವಾಹನಕ್ಕೆ R.C. ಪುಸ್ತಕ ಇರುತ್ತದೆ ಎಂದರೆ ಸರಿ. ದ್ವಿಚಕ್ರ ವಾಹನ ಸ್ಕೂಟಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಅದಕ್ಕೆ ಬೆಲೆ ರೂ. 1,20,000/- ಇರುವ ಬಗ್ಗೆ ತೋರಿಸಲು B-extract ಹಾಜರು ಪಡಿಸಿಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ಮಾಹಿತಿ ಇಲ್ಲ. ಅದರ ಫೋಟೊ ತೆಗೆದು ಹಾಜರು ಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಮನೆಗೆ ಹೋಗಲು ಬಿಡುವುದಿಲ್ಲ ಹಾಗೂ ಫೋಟೊ ಎಲ್ಲಿ ತೆಗೆಯುವುದು ಎಂದು ನುಡಿಯುತ್ತಾರೆ. ಈಗ್ಗೆ 3 ವರ್ಷಗಳಿಂದ 1 ನೇ ಪ್ರತಿವಾದಿ ನನ್ನ ಪ್ರಕಾರ ಮನೆಗೆ ಹೋಗಲು ಬಿಡುತ್ತಿಲ್ಲ. ಆ ವಾಹನ ಯಾವ ವರ್ಷದ್ದು ಎಂದು ಮಾಹಿತಿ ಇಲ್ಲ. ದ್ವಿಚಕ್ರ ವಾಹನ ಮೋಟಾರ ಬೈಕ್ ಯಾವ ಕಂಪನಿಯದ್ದು

ಎಂದು ಮಾಹಿತಿ ಇಲ್ಲ. ಅದನ್ನು ಯಾವಾಗ ಖರೀದಿಸಿದ್ದು ಎಂದು ಮಾಹಿತಿ ಇಲ್ಲ. ಅದು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಅದರ B–extract ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಅದನ್ನು ನಾನು ಎಲ್ಲಿಂದ ತರುವುದು ಎಂದು ನುಡಿಯುತ್ತಾರೆ. ಅದು ಯಾವ ವರ್ಷದ್ದು ಎಂದು ಗೊತ್ತಿಲ್ಲ. ನನ್ನ ಪ್ರಕಾರ ಅದನ್ನು ನನ್ನ ತಾಯಿ ಖರೀದಿಸಿದ್ದು. ಹೊಂಡಾ ಸಿಟಿ ಕಾರನ್ನು ಯಾವಾಗ ಖರೀದಿಸಿದ್ದು ಎಂದು ಮಾಹಿತಿ ಇಲ್ಲ. ಅದು ಯಾವ ವರ್ಷದ್ದು ಎಂದು ಮಾಹಿತಿ ಇಲ್ಲ. ವಿದ್ಯುತ್ ನೀರಿನ ಪಂಪ್ ಸೆಟ್ ಬಗ್ಗೆ ರಶೀದಿ ಹಾಜರು ಪಡಿಸಿಲ್ಲ. ಆ ಪಂಪ್ ಸೆಟ್ ನ್ನು ನಮ್ಮ ತೋಟದಲ್ಲಿ ಈಗಲೂ ಅಳವಡಿಸಿದ್ದಾರೆ.

**34**. ನನ್ನ ಪ್ರಕಾರ ದಾವಾ ಸ್ವತ್ತಿನಲ್ಲಿ ಜನರೇಟರ್ ಇತ್ತು. ದಾವಾ ಕ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು ಅಲ್ಲಿ ಹೋಗುತ್ತಿದ್ದಾಗ ನೋಡಿದ್ದೆ ಎಂದು ನುಡಿಯುತ್ತಾರೆ. ಪಂಪ್ ಸೆಟ್ ಅಳವಡಿಸುವ ಬಾವಿ ದಾವಾ ಸ್ವತ್ತಿನಲ್ಲಿ ಇದೆ. ಪಂಪ್ ಸೆಟ್ ನ್ನು ಇಂತಹ ಸರ್ವೆ ನಂಬರ್ ಸ್ವತ್ತಿನಲ್ಲಿ ಅಳವಡಿಸಲಾಗಿದೆ ಎಂದು ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಕ ಸ್ವತ್ತಿನಲ್ಲಿ ಹೇಳಿರುವ ಮೌಲ್ಯವನ್ನು ನನ್ನ ತಾಯಿ ಹೇಳಿರುತ್ತಾರೆ.

**35.** 1 ನೇ ಪ್ರತಿವಾದಿಗೆ ಗುಳ್ಯಾಪುರದಲ್ಲಿ ಮೊಬೈಲ್ ಶಾಪ್ ಇದೆ ಎಂದರೆ ಸರಿ. ಆ ಶಾಪ್ ನಲ್ಲಿ ಒಬ್ಬ ಕೆಲಸಗಾರ ರನ್ನು ಅವರು ಇಟ್ಟುಕೊಂಡಿದ್ದಾರೆ ಎಂದರೆ ಸಾಕ್ಷಿ ಆಗ ಇಟ್ಟು ಕೊಂಡಿರಲ್ಲಿ ಈಗ ಇಟ್ಟು ಕೊಂಡಿದ್ದಾರಾ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಶಾಪ್ ನಲ್ಲಿ ಅವರಿಗೆ ಒಳ್ಳೆ ವ್ಯವಹಾರ ನಡೆಯುತ್ತಿದೆ ಎಂದರೆ ಸಾಕ್ಷಿ ಒಳ್ಳೆ ವ್ಯವಹಾರ ಇದೆ ಎಂದು ಗೊತ್ತಿಲ್ಲ ಆದರೆ ವ್ಯವಹಾರ ಇಲ್ಲ ಎಂದು ಗೊತ್ತಿದೆ ಎಂದು ನುಡಿಯುತ್ತಾರೆ. ಗುಳ್ಯಾಪುರದಲ್ಲಿ ಇರುವ ಆ ಶಾಪ್ ನ್ನು ನಾನು ನೋಡಿದ್ದೇನೆ. ಆ ಶಾಪ್ ನಲ್ಲಿ ಸುಮಾರು 1 ಕೋಟಿ ಮೌಲ್ಯದ ಸ್ವತ್ತುಗಳು ಇವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಕ ಸ್ವತ್ತಿನಲ್ಲಿ item no. 9 ರಿಂದ 11 ಹೊರತು ಪಡಿಸಿ ಉಳಿದ ಎಲ್ಲಾ ಸ್ವತ್ತುಗಳನ್ನು 1 ನೇ ಪ್ರತಿವಾದಿ ಅವರ ಆ ಶಾಪ್ ನ ವ್ಯವಹಾರದಿಂದ ಖರೀದಿಸಿದ್ದು ಎಂದರೆ ಸಾಕ್ಷಿ ಆ ಶಾಪ್ ನಲ್ಲಿ ವ್ಯಾಪಾರವೆ ಇಲ್ಲ ಎಂದು ನುಡಿಯುತ್ತಾರೆ. ಆ item no. 9 ರಿಂದ 11 ನ್ನು 1 ನೇ ಪ್ರತಿವಾದಿಯ ಹೆಂಡತಿಗೆ ಮದುವೆ ಸಮಯದಲ್ಲಿ ಅವರ ಹೆಂಡತಿಯ ಮನೆಯವರು ನೀಡಿದ ಉಡುಗೊರೆಗಳಾಗಿರುತ್ತವೆ ಎಂದರೆ ಸಾಕ್ಷಿ ಅವರು ಏನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಾವಾ ಕ

ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತು ಗಳು ಅಲ್ಲ ಹಾಗೂ ಅವುಗಳನ್ನು ಲಪಟಾಯಿಸಲು ಸುಳ್ಳಾಗಿ ಹೇಳಿದ್ದೇನೆ ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಆಸ್ತಿಗಳು ಎಂದು ನುಡಿಯುತ್ತಾರೆ. ಆ ಮೊಬೈಲ್ ಶಾಪ್ ನ್ನು 15 ವರ್ಷಗಳಿಂದ ನಡೆಸುತ್ತಿದ್ದಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

**35.** ಮೋಟಾರ್ ವಾಹನ ಕಾಯ್ದೆ ಪ್ರಕಾರ ಬಂದ ಪರಿಹಾರದ ಹಣವನ್ನು ಈ ದಾವೆಯಲ್ಲಿ ತೋರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ತಂದೆ ಸತ್ತ ನಂತರ ತಾಯಿಗೆ ಬಂದ ಹಣ ಹಾಗೂ ಅದನ್ನು ಎಲ್ಲರಿಗೂ ಹಂಚಿದ್ದಾರೆ ಎಂದು ನುಡಿಯುತ್ತಾರೆ. ಆ ವಿಚಾರವನ್ನು ವಾದ ಪತ್ರದಲ್ಲಿ ಹೇಳಲು ಅವಶ್ಯಕತೆ ಇಲ್ಲದೆ ಇದ್ದುದರಿಂದ ಹೇಳಿಲ್ಲ.

**36.** ದಾವಾ ಆ 2 ನೇ item ನಲ್ಲಿ ಎಷ್ಟು ಅಡಿಕೆ ಹಾಗುಾ ತೆಂಗುಗಳು ಇವೆ ಎಂದು ಗೊತ್ತಿಲ್ಲ. 5 ಎಕರೆ ಜಮೀನಿನಲ್ಲಿ ಭಾಗಾಯಿತು ಪೂರ್ತಿಯಾಗಿ ಇದೆ. ಆ 5 ಎಕರೆಯಲ್ಲಿ ದಾವಾ ಅ item no 1 ಮತ್ತು 2 ಸ್ವತ್ತು ಹೊರತು ಪಡಿಸಿ ಅತಿಕ್ರಮಣದ ಜಾಗ ಕೂಡ ಇದೆ. ಅತಿಕ್ರಮಣದ ಜಾಗೆ ಸುಮಾರು 3 ಎಕರೆ ಇದೆ. ಆ 3 ಎಕರೆಯಲ್ಲಿ ಕೂಡ ಅಡಿಕೆ ಸಸಿ ನೆಡಲಾಗಿದೆ. ಆ 3 ಎಕರೆಯಲ್ಲಿ ಎಷ್ಟು ಅಡಿಕೆ ಸಸಿಗಳು ಇವೆ ಎಂದು ಗೊತ್ತಿಲ್ಲ. ಈಗ ದಾವಾ ಅ ದಾವಾ item no 1 ಮತ್ತು 2 ಮತ್ತು ಅತಿಕ್ರಮಣದ 3 ಎಕರೆಯನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ. ಅದರದಲ್ಲಿ ಈಗ ಎಲ್ಲಾ ಫಲ ಬರುವ ಮರಗಳಾಗಿರುತ್ತವೆ. ಆ ಮರಗಳನ್ನು ಬೆಳೆಸಲು ನೀರು ಹಾಕಬೇಕು ಹಾಗೂ ದಾವಾ ಸ್ವತ್ತಿನಲ್ಲಿ micro jet ನೀರು ಸಿಂಪಡಿಸಲು ಅಳವಡಿಸಲಾಗಿದೆ ಎಂದರೆ ಸರಿ. ಎಷ್ಟು ಅಂತಹ jet ಗಳು ಇವೆ ಎಂದು ನನಗೆ ಗೊತ್ತಿಲ್ಲ. ಆ ಮರಗಳಿಗೆ ವರ್ಷದಲ್ಲಿ ಒಂದು ಸಾರಿ ಗೊಬ್ಬರ ಹಾಕಬೇಕು ಎಂದರೆ ಸಾಕ್ಷಿ ಹಾಕಬೇಕು ಆದರೆ ಹಾಕದೆ ಕೂಡ ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿರುವ ಆ ಮರಗಳು ಗೊಬ್ಬರ ಹಾಕಲಾದ ಮರಗಳಾ ಅಥವಾ ಹಾಕದಿದ್ದ ಮರಗಳಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಆ ಮರಗಳನ್ನು 22 ವರ್ಷಗಳಿಂದ ನೋಡುತ್ತಿದ್ದೇನೆ. ಆ ದಾವಾ ಸ್ವತ್ತಿನಲ್ಲಿ ಭರಣ ಕಾಲುವೆಗಳು ಇರುವುದಿಲ್ಲ. ಆ ಮರಗಳನ್ನು ಬುಡ ಬಿಡಿಸಿ ಗೊಬ್ಬರ ತುಂಬಿರುವುದನ್ನು ನಾನು ನೋಡುತ್ತಿದ್ದಾಗ ನೋಡಿದ್ದೇನೆ. ಆ ರೀತಿ ಪ್ರತಿ ವರ್ಷ ಮಾಡಬೇಕಾಗುತ್ತದೆ ಎಂದರೆ

ಸರಿ. ಆ ಕೆಲಸವನ್ನು ಆಳುಗಳಿಂದ ಮಾಡಿಸಬೇಕಾಗುತ್ತದೆ ಎಂದರೆ ಸರಿ. ದಾವಾ ಅ ಸ್ವತ್ತಿನಲ್ಲಿ ಅಷ್ಟು ಮರಗಳು ಇದ್ದರೆ ಆ ಕೆಲಸ ಮಾಡಿಸಲು ವರ್ಷಕ್ಕೆ ಸುಮಾರು 3 ಲಕ್ಷ ಖರ್ಚು ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಖರ್ಚನ್ನು 1 ನೇ ಪ್ರತಿವಾದಿ ಭರಿಸುತ್ತಿದ್ದಾರೆ ಎಂದರೆ ಸಾಕ್ಷಿ ಹೂ ಎಂದು ಹೇಳಿ ನಂತರ ಗೊಬ್ಬರ ಹಾಕಿದರೆ ಮಾತ್ರ ಖರ್ಚು ಬರುತ್ತದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.